ಸಾಕ್ಷಿಗೆ ದಿನಾಂಕ 27-06-2023 ರಂದು ಪ್ರಮಾಣ ವಚನ ಭೋದಿಸಲಾಯಿತು

ನಾಗಯ್ಯ D.W.: 1

ಪಾಟೀ ಸವಾಲು. ಪಿರ್ಯಾದಿ ಪರ ಕೆ ಜೆ ವಕೀಲರಿಂದಃ-

ನಾನು ದ್ವಿತೀಯ ಪಿ ಯು ಸಿ ವರೆಗೆ ವಿದ್ಯಾಭಾಸ ಮಾಡಿದ್ದೇನೆ. ಈ ಹಿಂದೆ ನಾನು ಎಲೈಕ್ಟ್ರಿಕಲ್ ಕೆಲಸ ಮಾಡುತ್ತಿದ್ದು ಪ್ರಸ್ತುತ ಬೇರೆಯವರ ಜಮೀನು ಲಾವಣಿಗೆ ಹಿಡಿದುಕೊಂಡು ವ್ಯವಸಾಯವನ್ನು ಮಾಡುತ್ತೇನೆ. ನನಗೆ ಒಟ್ಟು ಇಬ್ಬರು ಹೆಣ್ಣು ಮಕ್ಕಳು 5 ಜನ ಗಂಡು ಮಕ್ಕಳು ಇರುತ್ತಾರೆ. ನನ್ನ ಗಂಡು ಮಕ್ಕಳು ಹಗರಿ ಬಸವೇಶ್ವರ ದೇವಸ್ಥಾನ ಚಿಮ್ಮನಹಳ್ಳಿ ಗ್ರಾಮದಲ್ಲಿ ಅರ್ಚಕರಾಗಿ ಪೂಜೆಯನ್ನು ಮಾಡುತ್ತಾರೆ. ನನಗೆ ಸ್ವಂತ ಮನೆ ಇರುವುದಿಲ್ಲ. ನಾನು ಹಾಲೀ ನಂದಿಬೇವೂರಿನಲ್ಲಿ ವಾಸವಾಗಿದ್ದೇನೆ. ನಾನು ಮತ್ತು ಪಿರ್ಯಾದಿ ಒಂದೇ ಕುಲಸ್ಥರು ಎಂದರೆ ಸರಿ.

ನಮ್ಮ ಕುಟುಂಬದವರು ಅವರವರ ಜೀವನ ಅವರೇ ನಡೆಸುತ್ತಿದ್ದು 8 ವರ್ಷಗಳಿಂದ ನಾನು ಒಂಟಿಯಾಗಿ ಬೇರೆ ವಾಸಿಸುತ್ತಿದ್ದೇನೆ. ನನ್ನ ಮಕ್ಕಳು ಬೇರೆ ಕಡೆ ವಾಸ ಮಾಡುತ್ತಾರೆ. ನನ್ನ ಎರಡನೇ ಹೆಂಡತಿ ಮಗ ಧಾರವಾಡದಲ್ಲಿ ಎಲೈಕ್ಟ್ರಿಕಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆಂದರೆ ಸರಿ. ನನಗೆ ಸಂಬಂದಿಸಿದಂತೆ ಇಟಗಿ ಗ್ರಾಮದಲ್ಲಿ ಎರಡು ಎಲೈಕ್ಟ್ರಿಕಲ್ ಶಾಪುಗಳು ಇರುತ್ತವೆಂದರೆ ಸರಿಯಲ್ಲ. ನನ್ನ ಮಕ್ಕಳಾದ ವೇದಮೂರ್ತಿ ಮತ್ತು ಸಿದ್ದಯ್ಯ ಸದರಿ ಎಲೈಕ್ಟ್ರಿಕಲ್ ಶಾಪುಗಳನ್ನು ನಡೆಸುತ್ತಿದ್ದಾರೆಂದರೆ ಸರಿಯಲ್ಲ.

ಚಿಮ್ಮನಹಳ್ಳಿ ಗ್ರಾಮದಲ್ಲಿ ನನಗೆ ಎರಡು ಸ್ವಂತ ಮನೆಗಳು ಇರುತ್ತವೆಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನನ್ನ ಮೂರನೇ ಹೆಂಡತಿ ಅವರ ಮಗ ವಾಸ ಮಾಡುತ್ತಾರೆಂದರೆ ಸರಿಯಲ್ಲ. ನಾನು ನನ್ನ ಮೊದಲನೇ ಹೇಂಡತಿ ಜೊತೆ ನಂದಿಬೇವೂರು ಗ್ರಾಮದಲ್ಲಿ ಎಲೈಕ್ಟ್ರಿಕಲ್ ಶಾಪನ್ನು ನಡೆಸುತ್ತಾ ಅವರ ಜೊತೆ ವಾಸವಾಗಿರುತ್ತೇನೆಂದರೆ ಸರಿಯಲ್ಲ.

ನನಗೆ ಬ್ಯಾಂಕ್ ವ್ಯವಹಾರ ಗೊತ್ತಿರುವುದಿಲ್ಲ. ನಾನು ಗ್ರಾಮೀಣ ಬ್ಯಾಂಕ್ ನಂದಿಬೇವೂರು ಶಾಖೆಯಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಿಪಿ-1 ನನ್ನ ಬ್ಯಾಂಕ್ ಖಾತೆಯ

ಚೆಕ್ಕಾಗಿರುತ್ತದೆ. ದಿಃ 13-07-2020 ರಂದು ನಾನು ಪಿರ್ಯಾದಿಯಿಂದ ರೂ.೮ ಲಕ್ಷಗಳನ್ನು ಕೈಗಡ ಸಾಲವೆಂದು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಪಿರ್ಯಾದಿಯು ಬಿ ಡಿ ಸಿ ಸಿ ಬ್ಯಾಂಕಿನಲ್ಲಿ ಸ್ಯಾಲರಿ ಸಾಲವನ್ನು ಮಾಡಿಸಿ ನನಗೆ ಅದರಲ್ಲಿ ರೂ. ೮ ಲಕ್ಷ ಹಣವನ್ನು ಕೈಗಡ ಸಾಲವೆಂದು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಪಿರ್ಯಾದಿಯು ಅನೇಕ ಬಾರಿ ಸದರಿ ಸಾಲವನ್ನು ವಾಪಾಸು ಕೊಡುವಂತೆ ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಸದರಿ ಸಾಲದ ಮರುಪಾವತಿಗಾಗಿ ನಿಪಿ-1 ರ ಚಕ್ಕನ್ನು ಪಿರ್ಯಾದಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಚಕ್ಕನ್ನು ಪಿರ್ಯಾದಿಯು ತನ್ನ ಬ್ಯಾಂಕ್ ಖಾತೆ ಇರುವ ಬಿ ಡಿ ಸಿ ಸಿ ಬ್ಯಾಂಕ್‌ಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದ್ದು, ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲವೆಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆಂದರೆ ಸರಿಯಲ್ಲ. ಪಿರ್ಯಾದಿಯು ಕೊಟ್ಟಂತಹ ನಿಪಿ-3 ರಲಿಖಿತ ನೋಟೀಸು ನನಗೆ ಜಾರಿಯಾಗಿರುತ್ತದೆಂದರೆ ಸರಿ. ನಿಪಿ-5 ರಲ್ಲಿರುವಂತಹ ಸಹಿಯು ನನ್ನ ಸಹಿಯಾಗಿರುತ್ತದೆಂದರೆ ಸರಿ. ಸದರಿ ನೋಟಿಸಿನ ಬಗ್ಗೆ ನನ್ನ ಮಗನು ನನಗೆ ಓದಿ ಹೇಳಿರುತ್ತಾನೆ. ನಾನು ನಿಪಿ-3 ರ ನೋಟೀಸಿಗೆ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲವೆಂದರೆ ಸರಿ. ಪಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-1ರ ಚಕ್ಕನ್ನು ಸಹಿ ಮಾಡಿ ಪಿರ್ಯಾದಿಗೆ ಕೊಟ್ಟಿದ್ದರೂ, ಆತನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ